सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ


**2ನೇ ಮತ್ತು 3ನೇ ಮಹಡಿ, ನಂ.16, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080,**
**ಇಮೇಲ್: karsec@gmail.com ☎:080-22205189/93**


## ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯಿತಿ ಸಾರ್ವತ್ರಿಕ/ಉಪ ಚುನಾವಣೆ ಮೇ-2022ರ ಚುನಾವಣಾ ವೇಳಾಪಟ್ಟಿಗೆ ಕೆಲವು ಗ್ರಾಮ ಪಂಚಾಯಿತಿಗಳನ್ನು ಸೇರಿಸುವ ಬಗ್ಗೆ.

**ಓದಲಾಗಿದೆ:** ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ: 21: ಇಜಿಪಿ: 2022 ದಿನಾಂಕ: 28.04.2022.

ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಮೇಲೆ ಓದಲಾದ ಆದೇಶದಲ್ಲಿ 2022ರ ಏಪ್ರಿಲ್ ಮಾಹೆಯಿಂದ- 2022ರ ಜುಲೈ ಮಾಹೆ ಯವರೆಗೆ ಅವಧಿ ಮುಕ್ತಾಯವಾಗಲಿರುವ 1 ಗ್ರಾಮ ಪಂಚಾಯಿತಿ ಮತ್ತು ಹಿಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ನಾಮಪತ್ರ ಸ್ವೀಕೃತವಾಗದ ಕಾರಣ ಚುನಾವಣೆ ನಡೆಯದೇ ಬಾಕಿ ಇದ್ದ 2 ಗ್ರಾಮ ಪಂಚಾಯಿತಿಗಳು ಸೇರಿದಂತೆ ಒಟ್ಟು 3 ಗ್ರಾಮ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆಯನ್ನು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ 201 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಎ ಮತ್ತು 308ಎಬಿ ರನ್ವಯ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು, 1993ರ ನಿಯಮ 12 ರನ್ವಯ ಚುನಾವಣಾ ವೇಳಾ ಪಟ್ಟಿಯನ್ನು ಘೋಷಿಸಲಾಗಿರುತ್ತದೆ.

ಮುಂದುವರೆದು, ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಿದ ನಂತರದಲ್ಲಿ ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳಿಗೂ ಪ್ರಸ್ತುತ ಹೊರಡಿಸಿರುವ ಚುನಾವಣಾ ವೇಳಾಪಟ್ಟಿಯಂತೆ ಚುನಾವಣೆ ನಡೆಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ ಸಂಖ್ಯೆ: ರಾಚುಆ:21: ಇಜಿಪಿ: 2022, ಬೆಂಗಳೂರು ದಿನಾಂಕ: 01.05.2022

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಂತೆ ಭಾರತ ಸಂವಿಧಾನದ ಅನುಚ್ಛೇದ 243K ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ರಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ, ಈ ಆದೇಶದ ಅನುಬಂಧ-1ರಲ್ಲಿರುವ ಗ್ರಾಮ ಪಂಚಾಯಿತಿಗೆ ಸಾರ್ವತ್ರಿಕ ಚುನಾವಣೆಯನ್ನು ಹಾಗೂ ಅನುಬಂಧ-2ರಲ್ಲಿನ ಗ್ರಾಮ ಪಂಚಾಯಿತಿಗಳ ಸದಸ್ಯ ಸ್ಥಾನಗಳಿಗೆ ಉಪಚುನಾವಣೆಯನ್ನು ಮೇಲೆ ಓದಲಾದ ಆದೇಶಕ್ಕೆ ಸೇರ್ಪಡೆ ಮಾಡಿದ್ದು, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸದರಿ ಗ್ರಾಮ ಪಂಚಾಯಿತಿಗಳಿಗೂ ಮೇಲಿನ ಆದೇಶದಂತೆ ಚುನಾವಣೆ ನಡೆಸಲು ಆದೇಶಿಸಿದೆ.

ಆದೇಶಾನುಸಾರ

M.S. [signature] 1/5/2022

(ಎಂ. ಎಸ್. ವೆಂಕಟೇಶ್)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

ಗೆ,

ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೋಲಾರ, ದಾವಣಗೆರೆ, ಚಾಮರಾಜನಗರ, ಬಾಗಲಕೋಟೆ, ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆ.

## ಅನುಬಂಧ-1

(ರಾಚುಆ:21: ಇಜಿಪಿ;2022, ದಿನಾಂಕ: 01.05.2022ಕ್ಕೆ ಲಗತ್ತಿಸಲಾದುದು)

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾ.ಪಂ. ಕ್ರ. ಸಂ. | ಗ್ರಾಮ ಪಂಚಾಯತಿ | ಒಟ್ಟು ಸದಸ್ಯ ಸ್ಥಾನಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ | 1 | ಕಗ್ಗಲೀಪುರ | 38 |

## ಅನುಬಂಧ-2

(ರಾಚುಆ:21: ಇಜಿಪಿ;2022, ದಿನಾಂಕ: 01.05.2022ಕ್ಕೆ ಲಗತ್ತಿಸಲಾದುದು)

ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳ ವಿವರ

| ಕ್ರ. ಸಂ. | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯತಿಯ ಹೆಸರು | ಒಟ್ಟು ಸದಸ್ಯ ಸ್ಥಾನಗಳು |
|---|---|---|---|---|
| 1 | ಕೋಲಾರ | ಮಾಲೂರು | 15-ರಾಜೇನಹಳ್ಳಿ | 1 |
| 2 | ದಾವಣಗೆರೆ | ಚನ್ನಗಿರಿ | 5-ಚಿರಡೋಣಿ | 1 |
| 3 | ಚಾಮರಾಜನಗರ | ಗುಂಡ್ಲುಪೇಟೆ | 19-ಭೀಮನಭೀಡು | 1 |
| 4 | ಬಾಗಲಕೋಟೆ | ಮುಧೋಳ | 12-ಚಿಚಖಂಡಿ ಕೆ.ಡಿ | 1 |
| 5 | ಕಲಬುರಗಿ | ಚಿತ್ತಾಪುರ | 11-ಮಾಲಗತ್ತಿ | 1 |
| 6 | ಬೀದರ್ | ಔರಾದ್ | 10-ಚಿಂತಾಕಿ | 1 |
| 7 | ಯಾದಗಿರಿ | ಹುಣಸಗಿ | 2-ಕಾಮನಟಗಿ | 1 |
| 8 | | ಹುಣಸಗಿ | 15-ಅಗ್ನಿ | 1 |
| | | | ಒಟ್ಟು | 8 |

M.S. Venkatesh 1/5/2022.

(ಎಂ. ಎಸ್. ವೆಂಕಟೇಶ್)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.